ಸಮಸ್ಯೆಯನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರಿಗೆ, ಮಾನ್ಯ ಪುಟ್ಟೇಗೌಡರಿಗೆ ಹಾಗೂ ಧ್ರುವನಾರಾಯಣ್ ರವರಿಗೆ ನನ್ನಿಂದಲೇ ಉತ್ತರ ಬೇಕು, ಅದರಿಂದ ಅವರಿಗೆ ಏನೂ ಅನುಕೂಲವಾಗಬಹುದು ಎಂದು ಮತ್ತೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬೆಳಿಗ್ಗೆನೇ ಈ ಪ್ರಶ್ನೆಯನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಆದಷ್ಟು ಬೇಗ, ಆದಷ್ಟು ಬೇಗ ಅಂದರೆ ಮತ್ತೆ ನೀವು ಎದ್ದು ನಿಂತು ಏನಾದರೂ ಕೇಳಬಹುದು. ಅದಕ್ಕೆ ಮುಂದಿನ 15–20 ದಿವಸಗಳಲ್ಲಿ ಇದಕ್ಕೆ ನಾನು ಅಂತಿಮ ಇತಿಶ್ರೀಯನ್ನು ಹಾಡುವುದರ ಮುಖಾಂತರ ಈ ಸಮಸ್ಯೆಯನ್ನು ಬಗೆಹರಿಸಿ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಿಓಎಂ ತೀರ್ಮಾನವನ್ನು ಜಾರಿ ಮಾಡಿ ಎಂದು ಹೇಳಿಬಿಡಿ, ಬೇರೆ ಏನೂ ಉತ್ತರ ಬೇಡ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಈ ವಿಷಯದ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನನ್ನ ಗಮನಕ್ಕೆ ತಂದಿದ್ದಾರೆ, ನಾವು ಕ್ರಮ ತೆಗೆದುಕೊಂಡಿದ್ದೇವೆ. ಇನ್ನು 10–15 ದಿವಸದೊಳಗೆ ತೀರ್ಮಾನ ಮಾಡಿ ಕೊಡುತ್ತೇವೆ.

5. ನಿಯಮ 69ರ ಮೇಲೆ ಮುಂದುವರಿದ ಚರ್ಚೆ

ವಿಷಯ: ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ಇವತ್ತು ವಿಶ್ವದ್ಯಾಂತ ಬೆಂಗಳೂರು ಮೈಸೂರು ಕಾರಿಡಾರ್ ಬಗ್ಗೆ ಚರ್ಚೆಯಾಗುತ್ತಿದೆ. ಎಲ್ಲೆಡೆ ರಸ್ತೆಗಳಿಂದ ಹಿಡಿದು ಮಾಧ್ಯಮಗಳಲ್ಲಿ ಇದರ ಬಗ್ಗೆ ವಿಶೇಷವಾದ ಚರ್ಚೆಯಾಗುತ್ತಿದೆ. ಈ ಒಂದು ಸದನದ ಸದಸ್ಯನಾಗಿ ಬಹುಶಃ ಈ ಘಟನಾವಳಿಗಳು ಸಂಭವಿಸುವ ಸಂದರ್ಭದಲ್ಲಿ ನಾನು ಈ ಸದನದ ಸದಸ್ಯನಾಗಿಲ್ಲದೆ ಇರತಕ್ಕಂಥ ಒಂದು ಹಿನ್ನೆಲೆಯಲ್ಲಿ ಈಗ ಸದಸ್ಯನಾಗಿ ನಾನು ಬಹಳ ಕುತೂಹಲದಿಂದ ಈ ಚರ್ಚೆಯನ್ನು ಕೇಳಿದ್ದೇನೆ. ಮಾಧ್ಯಮಗಳಲ್ಲಿ ನೋಡಿದ್ದೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ ಹಾಗೆ ಬಹುಶಃ ಹಿಂದೆ ಡಿಮ್ಯಾಂಡ್ ಮಾಡಿದರು ಒಂದು ಶ್ವೇತಪತ್ರ ಕೊಡಬೇಕು ಇದರ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಸದಸ್ಯರಿಗೆ ಕೊಡಬೇಕು, ಆಗ ಚರ್ಚೆ ಮಾಡಲಿಕ್ಕೆ ಸುಲಲಿತವಾಗುತ್ತದೆಂದು ಹೇಳಿದಾಗ ಬಹುಶಃ ಅವರು ಹೇಳಿದರು ರೈಟ್ ಟು ಇನ್‌ಫರ್‌ಮೇಶನ್‌ನಿಂದ ಪ್ರೊಕ್ಯೂರ್ ಮಾಡಿಕೊಳ್ಳಬಹುದು ಅಂತ. ಅದರೂ ನಮಗೆ ಇರತಕ್ಕಂಥ ಮೂಲಗಳ ಮುಖೇನ ಹಲವಾರು ಮಾಹಿತಿಗಳನ್ನು ಸಂಗ್ರಹಿಸಿ ಅವಲೋಕನ ಮಾಡಿದಾಗ ನಿಜವಾಗಲೂ ನನಗೆ

ಒಂದು ನೆನಪಾಗುತ್ತದೆ. ಈ ರಾಜ್ಯದ ಮುಖ್ಯಮಂತ್ರಿಯಾಗಿ, ರೈತರ ಬಗ್ಗೆ, ದೀನದಲಿತರ ಬಗ್ಗೆ ಧ್ವನಿ ಕೊಟ್ಟಂತಹ ಧೀಮಂತ ಧನಿ ದಿವಂಗತ ದೇವರಾಜ ಅರಸರು ಬಹುಶಃ ಲ್ಯಾಂಡ್ ಸೀಲಿಂಗ್ ಅಂತ ಮಾಡಿದರು. 50 ಎಕರೆಗಿಂತ ಮಿತಿ ಮೀರಬಾರದು ಅಂತ ಹೇಳಿ. ಅದರ ಮೂಲ ಉದ್ದೇಶ ರೈತಾಪಿ ಜನ ಈ ದೇಶದ ಬೆನ್ನೆಲುಬು ಅಂತ ಏನು ನಾವು ಕರೆಯುತ್ತೇವೆ, ಆ ರೈತರ ಜಮೀನನ್ನು ಉಳಿಸಬೇಕು ಎನ್ನತಕ್ಕಂಥಾದ್ದು ಅವರ ಮೂಲಕ ಉದ್ದೇಶವಾಗಿತ್ತು. ಹಂತ ಹಂತವಾಗಿ ಈ Industrialisation ಎನ್ನತಕ್ಕಂಥ ಒಂದು ಕುಂಟು ನೆಪದಿಂದ ಇವತ್ತು ಆ ಮುಖವಾಡ ಹಾಕಿಕೊಂಡು ರೈತರನ್ನು ಕಬಳಿಸುತ್ತಾ ಇರತಕ್ಕಂಥಾದ್ದನ್ನು ನೋಡಿದಾಗ ಬಹುಶಃ ಇದು ಕೇವಲ ಬೆಂಗಳೂರು ಮೈಸೂರಿನ ಮಧ್ಯೆ ಆಗತಕ್ಕಂಥ ರಸ್ತೆಯೇ ಅಥವಾ ಆ ಒಂದು ನೆಪದಲ್ಲಿ ಏನು ಬಿಲ್ಡ್ ಆಪರೇಟ್ ಅಂಡ್ ಟ್ರಾನ್ಸ್‌ಫರ್ ಎನ್ನತಕ್ಕಂಥ ನೆಪದಲ್ಲಿ ಒಂದು ಲೂಟ್ ಆಗುತ್ತಿದೆಯೇ ಎನ್ನತಕ್ಕಂಥ ಒಂದು ಶಂಕೆ ನನಗಾದರೂ ಬರುತ್ತದೆ ಎನ್ನುವ ಭಾವನೆಯನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾವು ಒಂದು ದೃಷ್ಟಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಏನು 224 ಜನ ಶಾಸಕರು ಇದ್ದೇವೆ. We are the maral custodious. ಈ ಒಂದು ರೈತಾಪಿ ಸಮುದಾಯದ ಹಿತಾಸಕ್ತಿ ಮತ್ತು ಈ ಕೃಷಿ ಭೂಮಿ ದಿನೇ ದಿನೇ ಬೆಂಗಳೂರು ನಗರದಲ್ಲಿ, ಅದರಲ್ಲೂ ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿ ಫಲವತ್ತಾದ ಭೂಮಿ ಕಡಿಮೆಯಾಗುತ್ತಿದೆ. ಇಂಡಸ್ಟ್ರಿಯಲ್ ರೆವಲ್ಯೂಷನ್ ಆಗಬೇಕು ನಿಜ. ಆದರೆ ಈ ಒಂದು ನೆಪದಲ್ಲಿ ಕಡಿಮೆಯಾಗುತ್ತಿರುವುದನ್ನು ನೋಡಿದರೆ ಒಂದು ಕಡೆ ಆತಂಕವಾಗುತ್ತದೆ. ಮುಂದಿನ ದಿನಗಳಲ್ಲಿ ಬಹಳ ಉತ್ಕೃಷ್ಟವಾದಂಥ Fanna and Flora ಇರತಕ್ಕಂಥ ಬೆಂಗಳೂರು ಮತ್ತು ಮೈಸೂರಿನ ಮಧ್ಯೆ ಇರತಕ್ಕಂಥ ಪ್ರದೇಶ ಬಹುಶಃ ಈ ಒಂದು ವಾತಾವರಣ ಕಾಣಲಿಕ್ಕೆ ಸಾಧ್ಯವಿಲ್ಲವೇನೋ ಎನ್ನತಕ್ಕಂಥ ಆತಂಕ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಒಂದು ಸಂದರ್ಭದಲ್ಲಿ ಖೇಣಿಯವರು ಮಾತನಾಡಿದ್ದನ್ನು ನೋಡಿದಾಗ ಬಹುಶಃ ನಮಗೆ ಆಶ್ಚರ್ಯವಾಗುವುದು ಏನೆಂದರೆ ಮುಂದಿನ ದಿನಗಳಲ್ಲಿ ಹಲವಾರು ಜನ ಉಲ್ಲೇಖ ಮಾಡುತ್ತಿದ್ದರು ಈ ರಾಷ್ಟ್ರದಲ್ಲಿ ಹೇಗೆ ವ್ಯಾಪಾರ ಮಾಡಲಿಕ್ಕೆ ಬಂದಂತಹ ಬ್ರಿಟೀಷರು ಆಗಲಿ, ಪೋರ್ಚ್‌ಗೀಸರು ಆಗಲಿ ದಕ್ಷರಾಗಲಿ, ಹೇಗೆ ಬಹಳ ಬುದ್ಧಿವಂತಿಕೆಯಿಂದ ವ್ಯಾಪಾರ ಮಾಡುತ್ತಾ ಮಾಡುತ್ತಾ ಹಾಗೆಯೇ ರಾಜರುಗಳ ಸ್ನೇಹಹಸ್ತವನ್ನು ಬೆಳೆಸಿ ಕ್ರಮೇಣವಾಗಿ ರಾಜರಾಜರುಗಳಿಗೆ ಬಿರುಕನ್ನು ತಂದು ಈ ರಾಜ್ಯವನ್ನೇ, ಈ ದೇಶವನ್ನೇ ಆಡಳಿತ ಮಾಡಿದಂತಹ ಇತಿಹಾಸ ಇರುವಾಗ ಈ ಒಂದು ಹಿನ್ನೆಲೆಯಲ್ಲಿ

ಬಹುಶಃ ಇಂತಹ ಒಂದು ಆರ್ಥಿಕವಾಗಿ ಮುಂದಿನ ದಿನಗಳಲ್ಲಿ ನಾವು ಗುಲಾಮರಾಗುತ್ತೇವೆಯೋ ಏನೋ ಎನ್ನತಕ್ಕಂಥ ಒಂದು ಆತಂಕ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸರ್ಕಾರವನ್ನೇ ಇವತ್ತು ಕತ್ತು ಹಿಸುಕತಕ್ಕಂಥ ಒಂದು ಮಟ್ಟದಲ್ಲಿ ನೋಡಿದಾಗ ಇಂತಹ ಕಂಪನಿಗಳ ಅವಶ್ಯಕತೆ ನಮ್ಮ ರಾಜ್ಯಕ್ಕೆ ಇದೆಯೇ? ನಮ್ಮ ರಾಜ್ಯದಲ್ಲಿ ಹಾಲು ಕೊಟ್ಟವರ ಮನೆ ಕರು ಸಾಯಲಿ ಎಂದು ಹೇಳುವ ನೈಸ್ ಕಂಪನಿಗಳಂಥವರ ಅವಶ್ಯಕತೆ ಇದೆಯಾ? ನಾನು ನೋಡುತ್ತಾ ಹೋದೆ. ಕ್ರಾನಲಾಜಿಕಲ್ ಈವೆಂಟ್ಸ್ ಪ್ರಕಾರ 1988ರಲ್ಲಿ ಬೆಂಗಳೂರಿನಲ್ಲಿ ಐಟಿ ಹಬ್ ಹೆಚ್ಚುತ್ತಿರುವ ದಿನಗಳಲ್ಲಿ ಜನಸಂಖ್ಯೆ ಮತ್ತು decongest ಮಾಡುವ ದೃಷ್ಟಿಯಿಂದ ಸುಮಾರು 137 ಕಿಮೀ.ಗಳ ಈ counter magnate ಅನ್ನು create ಮಾಡಬೇಕೆಂಬ ದೃಷ್ಟಿಯಿಂದ ರಾಜ್ಯ ಹೆದ್ದಾರಿ 1786ನ್ನು Two cities ಮಧ್ಯೆ ತರಬೇಕು ಅಂತ ಒಂದು ಟೆಂಡರ್ ಕರೆದಾಗ ಒಂದೇ ಒಂದು ಕಂಪನಿ ಬಂತು. ಬಹಳ ಸ್ಟ್ರಿಂಜೆಂಟ್ ಕಂಡಿಶನ್ ಹಾಕಿದ್ದರಿಂದ ಈ ರೀತಿ ಆಯಿತು. 1995ರಲ್ಲಿ U.S.A.ನ ಗವರ್ನರ್ ವಿಜಿಟ್ ಮಾಡಿದ್ದರು. ಅಂದಿನ ಮುಖ್ಯಮಂತ್ರಿಗಳು ಅಥವಾ ನಾನು ಯಾರ ಹೆಸರನ್ನೂ ಉಲ್ಲೇಖ ಮಾಡಲು ಹೋಗುವುದಿಲ್ಲ, ಬಹುಶಃ ಯಾರೇ ಮಾಡಿದ್ದರೂ ಈ ರಾಜ್ಯದ ಹಿತದೃಷ್ಟಿಯಿಂದ ಆರಂಭಗೊಂಡಿದ್ದು; ಈ ನೈಸ್ ಕಂಪನಿ ಎಲ್ಲಿ ಹುಟ್ಟಿಕೊಂಡಿತು ಎಂದು ಕ್ರಾನೊಲಾಜಿಕಲ್ ಆರ್ಡರ್‌ನಲ್ಲಿ ಹುಡುಕುತ್ತಾ ಹೋಗಿ ನೋಡಿದಾಗ, ಆರಂಭದಲ್ಲಿ ಈ ಸಂಸ್ಥೇನೇ ಇರಲಿಲ್ಲ. ಇದು ಹೇಗೆ ಉಗಮವಾಯಿತು, ಯಾರು ಇವರಿಗೆ ಅವಕಾಶ ಕೊಟ್ಟರು, ಈ ಒಂದು ಎಂಓಯು ಮಾಡುವಾಗ ಏನಾಯಿತು ಅಂತ ನೋಡಿದರೆ ನಿಜವಾಗಿಯೂ ಭಯವಾಗುತ್ತದೆ. ಬಹುಶಃ ಬಹುರಾಷ್ಟ್ರೀಯ ಕಂಪನಿಯೆಂಬ ಮುಖವಾಡ ಹಾಕಿ ಹೇಗೆ ಈ ರಾಜ್ಯದ ಬೊಕ್ಕಸವನ್ನು ರೈತರ ಭೂಮಿಯನ್ನು ಲಪಟಾಯಿಸುವುದಕ್ಕೆ ಪ್ರಯತ್ನ, ಮಾಡುತ್ತಾರೆ ಎಂಬುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದ್ದಂತಹ ವೆನೆಸ್ ಆಂಜೆನಾ, ಆಗಲಿ ಅಥವಾ ಸ್ಯಾಬ್ ಇಂಜಿನಿಯರಿಂಗ್ ಆಗಲಿ ಬಾಬಾ ಕಲ್ಯಾಣ ಗ್ರೂಪ್ ಆಗಲಿ ಇವುಗಳಲ್ಲಿ ಎರಡು ಕಂಪನಿಗಳು ಎಲ್ಲಿ ಹೋಯಿತು ನಂತರ ಏನಾಯಿತು ಅಂತ ನನಗಾದರೂ ಶಂಕೆ ಬರುತ್ತದೆ. ಬಹಳ ಸ್ಪಷ್ಟವಾಗಿ ಈ ನೈಸ್ ಎಲ್ಲಿಂದ ಬಂತು ಅಂತ ಹುಡುಕಿ ನೋಡಿದಾಗ, ಅದು ತೂರಿಬಂದಿರುವುದೇ ಹಿಂಬದಿಯಿಂದ. ನೈಸ್ ನಡೆದು ಬಂದ ದಾರಿ ಮತ್ತು ಹಿಡಿದ ಅಡ್ಡದಾರಿ ಎಂದು ಒಂದು ಲೇಖನ ನಾನು ಓದಿದಾಗ ಬಹಳ ಆಶ್ಚರ್ಯವಾಯಿತು. ನಾನು ಕೇಳುವುದು, ಇದೆಲ್ಲಾ ಯಾಕೆ ನಮ್ಮ ಉನ್ನತ ಐಎಎಸ್ ಅಧಿಕಾರಿಗಳಿಗೆ ಗೊತ್ತಾಗಲಿಲ್ಲ? ಈ ಕಂಡೀಷನ್ಸ್‌ರ್‌ಗಳನ್ನು ಲೇ ಮಾಡಿಕೊಂಡು ನಮ್ಮ

ಮರಣಶಾಸನ ನಾವೇ ಬರೆದುಕೊಳ್ಳುವ ರೀತಿ ನಮ್ಮ ರೈತರ ಭೂಮಿಯನ್ನು ನಾವೇ ನಾಶ ಮಾಡುವ ರೀತಿಗೆ ಹೇಗೆ ಅವಕಾಶ ಕೊಟ್ಟರು ಎಂಬುದು ನಿಜವಾಗಿಯೂ ಆತಂಕ ಆಗುತ್ತದೆ. ಆಗ ರಸ್ತೆ ಮಾಡಬೇಕೆನ್ನುವುದಕ್ಕೆ ಉದ್ದೇಶ ಸೀಮಿತವಾಗಿತ್ತು. ಬಹುಶಃ ನಮ್ಮ ಕೇಂದ್ರ ಸರ್ಕಾರದ ಪರಿಸರ ಇಲಾಖೆ ಬಹಳ ಚೆನ್ನಾಗಿ ಹೇಳುತ್ತಾರೆ. ಪರಿಸರ ಹೊಂದಾಣಿಕೆ ಆಗುವುದಿಲ್ಲ ಮತ್ತು Fauna & Flora, ಪಕ್ಷಿಸಂಕುಲಗಳು ಜೀವಕ್ಕೆ ತೊಂದರೆಯಾಗುತ್ತದೆ ಎಂಬ ಎಲ್ಲಾ ಅಭಿಪ್ರಾಯಗಳಿದ್ದರೂ ಟೌನ್‌ಶಿಫ್ಸ್ ಅಗತ್ಯತೆ ಇತ್ತಾ ಯಾಕೆ ಅದಕ್ಕೆ ಅವಕಾಶ ಕೊಟ್ಟರು? ಅವರು ಟೋಲ್ ಸಂಗ್ರಹಿಸಿ ರಸ್ತೆ ರಚಿಸಲು ಸಾಧ್ಯವಿತ್ತು. ಅದು ಬಿಟ್ಟು ಅವರಿಗೆ ಎಲ್ಲೋ ಒಂದು ಕಡೆ ಸಾಫ್ಟ್‌ಕಾರ್ನರ್ ತೋರಿಸಿರುವುದು ಯಾವುದೇ ಸರ್ಕಾರವಾಗಿರಲಿ ಅದು ತಪ್ಪು ಎಂಬ ಭಾವನೆ ಈ ಸಂದರ್ಭದಲ್ಲಿ ಹೇಳುತ್ತೇನೆ. 5 ಟೌನ್‌ಶಿಫ್ಸ್ ಬರುವುದರಿಂದ 137 ಕಿಮೀ. ಉದ್ದ ಇರತಕ್ಕಂಥ Rice Bowl ಎಂದು ಏನು ಕರೆಯುತ್ತೇವೆ, ಅದು ಸಂಪೂರ್ಣವಾಗಿ ನಾಶವಾಗುತ್ತದೆ. ಅಲ್ಲಿದ್ದ ಪಕ್ಷಿಪ್ರಾಣಸಂಕುಲ ನಾಶವಾಗುತ್ತದೆ. ಬಹುಶಃ ರಸ್ತೆಗೆ ಮಾತ್ರ ಸೀಮಿತವಾಗಬೇಕಾಗಿತ್ತು. ಕಾವೇರಿ ನೀರನ್ನು ಕೊಡುತ್ತೇವೆ ಅಂತ ಹೇಳಿದ್ದಾರೆ, ಕಾವೇರಿ ನೀರು ಬೆಂಗಳೂರಿಗೇ ಸಾಲದೇ ಇರುವಾಗ ತಮಿಳುನಾಡು ಹಾಗೂ ನಮ್ಮ ಮಧ್ಯೆ ಇರುವ ಒಪ್ಪಂದದ ಹಿನ್ನೆಲೆಯಲ್ಲಿ ಇದು ನಿಜವಾಗಿಯೂ ಸಾಧ್ಯವಿದೆಯಾ ಎಂಬುದು ನನ್ನ ಪ್ರಶ್ನೆ. ಹಿಂದೆ ಹಾಕಿದ ಸೋಮಶೇಖರರೆಡ್ಡಿಯವರ ಪಿಎಲ್‌ಅನ್ನು ಓದಿನೋಡಿದಾಗ ಎಲ್ಲೋ ಒಂದು ಕಡೆ ಈ ರಾಜ್ಯದ ಹಿತಾಸಕ್ತಿ ನೋಡಲು ಹಲವಾರು ಪ್ರಯತ್ನಗಳಾಗಿವೆ. ಇವೆಲ್ಲಾ ಯಾಕೆ ನಮ್ಮ ಅಧಿಕಾರಿಗಳ ಗಮನಕ್ಕೆ ಬರಲಿಲ್ಲ? ಯಾರೋ ಸರ್ಕಾರದಲ್ಲೇ ಇದ್ದು ಕೊಂಡು, ಬಹುಶಃ ಕೆಲವು ಅಧಿಕಾರಿಗಳ ಹೆಸರು ಹೇಳುತ್ತಿದ್ದರು, ನಮ್ಮಿಂದ ಹೋಗಿ ಅಲ್ಲಿ ನಿರ್ದೇಶಕ, ಸಲಹೆಗಾರರಾಗಿಯೋ ಪಾರ್ಟ್‌ನರ್ ಆಗಿಯೋ ಈ ರಾಜ್ಯದ ರೈತರ ಭೂಮಿಯನ್ನು 10 ರೂ.ಗೆ ಅಥವಾ ಐದಾರು ಲಕ್ಷಕ್ಕೆ ಕೊಂಡು 50, 60 ಲಕ್ಷಕ್ಕೆ ಕೋಟ್ಯಂತರ ರೂ.ಗಳಿಗೆ ಮಾರುವುದು ಯಾವುದು ಸ್ವಾಮಿ? ಇವತ್ತು ಒಂದು ಉದಾಹರಣೆ ಹೇಳಬಯಸುತ್ತೇನೆ: ಹೇಗೆ ಈ ಕಂಪನಿಗಳು ರಿಯಲ್ ಎಸ್ಟೇಟ್ ಬೂಮ್‌ನಲ್ಲಿ ಶಾಮೀಲಾಗುತ್ತವೆ ಎಂದು ಹಲವಾರು ಜನ ಮಾತನಾಡುತ್ತಿದ್ದರು. ಕೇವಲ ಎಕರೆಗೆ ಒಂದು ಎರಡು ಸಾವಿರ ರೂ.ಗಳಿಗೆ ಕೊಂಡು ಇವತ್ತು 20 ಕೋಟಿ ರೂ.ಗೆ ಮಾರುತ್ತಿರುವುದನ್ನು ಬೆಂಗಳೂರಿನಲ್ಲಿ ನೋಡುತ್ತಿದ್ದೇವೆ. ಉದಾಹರಣೆಗೆ ಕಿರ್ಲೋಸ್ಕರ್ ಕಾರ್ಖಾನೆ, ನನ್ನ ಕ್ಷೇತ್ರದಲ್ಲಿದೆ. ಮೈಸೂರು ಮಹಾರಾಜರು ಕಾರ್ಖಾನೆ ಬೆಳೆಯಲಿ ಅಂತ ಕೊಟ್ಟರು. ಮಧ್ಯದಲ್ಲಿ ಲಾಸ್ ಅಂತ ತೋರಿಸಿದರು, ಕೇತಮಾರನಹಳ್ಳಿ

ಸುತ್ತಮುತ್ತಲಿದ್ದ ರೈತರಿಂದ ಕೊಂಡಿದ್ದು, ಆಗಿನ ದಿನಗಳಲ್ಲಿ 500 ರೂ. ಕೊಟ್ಟಿದ್ದರೆ ಹೆಚ್ಚು. ಇವತ್ತು ಕೋಟಿ ರೂ.ಗೆ ಕೊಡುತ್ತಿರುವುದನ್ನು ನೋಡುತ್ತಿದ್ದೇವೆ. ಹೇಗೆ ರೈತರ ಹಿತವನ್ನು ನಾವು ನೆಗ್ಲೆಟ್ ಮಾಡಿ ಇಂತಹ ಕಂಪನಿಗಳು ಬಂದಾಗ ಕೆಂಪುಹಾಸು ಹಾಕಿ ಟೌನ್‌ಶಿಫ್ಸ್ ಮಾಡಲಿಕ್ಕೆ, ಕಮರ್ಷಿಯಲ್ ಮಾಡಲಿಕ್ಕೆ ಇಂಡಸ್ಟ್ರೀಸ್ ಮಾಡಲಿಕ್ಕೆ ಬಹಳ ಸುಲಭವಾಗಿ ಕೊಟ್ಟುಬಿಡುತ್ತೇವೆ. ಇದನ್ನು ಬಹಳ ಗಂಭೀರವಾಗಿ ಸರ್ಕಾರ ಪರಿಗಣಿಸಬೇಕು. ಈ ಯೋಜನೆಗೆ ಬೇಕಾದ ಹಣವನ್ನು ಟೋಲ್‌ನಿಂದ ಖಂಡಿತ ಮಾಡಲು ಸಾಧ್ಯವಿತ್ತು. ಈಗ ಕೇಂದ್ರವು ರಚಿಸಿರುವ ರಸ್ತೆಗಳಲ್ಲಿ ಟೋಲ್ ಸಂಗ್ರಹಿಸುತ್ತಿರುವುದನ್ನು ನೋಡಿದಾಗ ಖಂಡಿತವಾಗಿ ಅದಾಗುತ್ತಿತ್ತು. ಅದು ಬಿಟ್ಟು ಇಂತಹ ಯೋಜನೆಗೆ ಅವಕಾಶ ಕೊಟ್ಟಿದ್ದು ನಿಜವಾಗಿಯೂ ಸರಿಯಲ್ಲ. ಈಕ್ವಿಟಿಯಾಗಿ ಈ ಸಂಸ್ಥೆ ಹಣವನ್ನೇ ಹಾಕಿಲ್ಲ. ಬರಿಗೈಲೇ ಬುಗುರಿ ಆಡಿಸಲು ಯಶಸ್ವಿಯಾಗಿದೆ. ಈ ನೈಸ್ ಕಂಪನಿ. ಈ ಕಂಪೆನಿದ್ದು ಸರ್ಕಾರದ್ದೇ ಹಣ, ಸರ್ಕಾರದ್ದೇ ಭೂಮಿ ಸರ್ಕಾರದ ಹೆಸರಿನಲ್ಲೇ ಸಾಲ ಎತ್ತಿ ಮಾಡಹೊರಟಿರುವುದನ್ನು ನೋಡಿದಾಗ, ಈ ರೀತಿ ಕಣ್ಣಿಗೆ ಮಣ್ಣೆರಚುವುದರಲ್ಲಿ ಯಾರ ಶಾಮೀಲು ಆಗಿದ್ದಾರೆ ಎಂಬುದು ಗೊತ್ತಾಗಬೇಕು. ಬಹುಶಃ ಹೇಳುತ್ತಾರೆ, ಮುಂದೆ ಈ ರಾಜ್ಯದಲ್ಲಿ ಇನ್‌ವೆಸ್ಟ್ ಮಾಡಲು ಯಾರೂ ಬರುವುದಿಲ್ಲ ಅನ್ನುತ್ತಾರೆ. ಯಾರು ಬರುತ್ತಾರೋ ಬಿಡುತ್ತಾರೋ, ಆದರೆ ಮುಂದೆ ಆಗುವ ಎಂಒಯು ಅಥವಾ ಫ್ರೇಮ್ ಕರಾರಾಗಲಿ ಯಾವುದೇ ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಎಚ್ಚರಿಕೆಯಿಂದಿರಲು ಇದು ನಿಜವಾಗೂ ಒಂದು ಪಾಠವಾಗಬೇಕು. ಇನ್ನೊಂದು, ಸುಪ್ರೀಂಕೋರ್ಟಿಗೇ ನಾವು ಬದ್ಧರಾಗುವುದಾದರೆ ಹೆಚ್ಚಳವಾಗಿರುವ ಭೂಮಿಯನ್ನು ಸರ್ಕಾರ ಮತ್ತೆ ತನ್ನ ಕೈಗೆ ತೆಗೆದುಕೊಳ್ಳಬೇಕು. ಅದನ್ನು ರೈತರಿಗೆ ಕೊಡುವುದೇ ನೀವೇ ಇಟ್ಟುಕೊಳ್ಳುವಿರೋ ಒಟ್ಟಿನಲ್ಲಿ ವಾಪಸ್ ತೆಗೆದುಕೊಳ್ಳುವುದಾಗಬೇಕು. ರಸ್ತೆಗೆ ಮಾತ್ರ ಸೀಮಿತವಾಗಬೆಕು. ಬಿಡದಿಯಿಂದ ಶ್ರೀರಂಗಪಟ್ಟಣದವರೆಗೆ ಟೌನ್‌ಶಿಫ್ಸ್ ಮಾಡಕೂಡದು. ಬಹುಶಃ ಅದೇ ದೃಷ್ಟಿಯಿಟ್ಟುಕೊಂಡು ಇವರು ಮಾಡುತ್ತಿರುವುದು. ಆ ದೃಷ್ಟಿಯಿಂದಲೇ ರಸ್ತೆ ಮಾಡುತ್ತೇವೆ ಅಂತ ಬಂದಿದ್ದಾರೆ. ಇನ್ನೂ ಹೆಚ್ಚಿಗೆ ನಾನು ಹೇಳಲು ಇಷ್ಟಪಡುವುದಿಲ್ಲ. ಶಾಸಕಾಂಗದ ಪರವಾಗಿ ರಾಜ್ಯ ಉಚ್ಚ ನ್ಯಾಯಾಲಯವು ಎತ್ತಿಹಿಡಿದಿದೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತದೆ: 'Laws will make it clear that the provisions of the impugned agreement did not bind the Legislature. It is always open to the Legislature to make such laws as it deems fit. It has been

denied that the Legislature of the Government of Karnataka are bound hand and foot to sub serve the interest of the respondent. Neither the State Government nor the replying respondent. can subvert the provision of Articles 196 to 201 of the Constitution of India. The power of the Legislature to enact the laws within the sphere allotted under different lists of seventh schedule being plenary in nature and clause in the agreement cannot constitute to have the effect of binding. The Legislature which can reject the proposal of Executive to enact any law agreed to by the Government. Legislature, in its wisdom can even nullify the agreement already entered into.'

ಇಷ್ಟೊಂದು ಅಧಿಕಾರ ನಮಗಿದ್ದಾಗ ಇಂತಹ ಗೋಲ್‌ಮಾಲ್ ಸಂಸ್ಥೆಗಳ ಬಗ್ಗೆ ತುಂಬಾ ಎಚ್ಚರಿಕೆಯಿಂದಿರಬೇಕು. ಈ ಮಾತು ನಾನಿವತ್ತು ಹೇಳುತ್ತಿಲ್ಲ, ಹಿಂದೆ ಯಡಿಯೂರಪ್ಪನವರು ಹೇಳಿದ್ದಾರೆ. ಇವತ್ತು ಬಹಳ ಸ್ಪಷ್ಟವಾಗಿ ಹೇಳಬೇಕು, ಯಾವುದೇ ಒತ್ತಡಗಳಿದ್ದರೂ ಈ ಕಡೆ ಸ್ಥಾನದಲ್ಲಿ ನಿಂತು ಏನು ಹೇಳಿದ್ದರೋ ಅದೇ ರೀತಿ ಯಡಿಯೂರಪ್ಪನವರು ಬದ್ಧರಾಗಿ ನಿಂತುಕೊಳ್ಳಬೇಕು. ಎಷ್ಟೇ ಒತ್ತಡಗಳಿರಲಿ, ರಾಜ್ಯದ ರೈತರ ಹಿತಾಸಕ್ತಿ ದೃಷ್ಟಿಯಿಂದ ಅವರು ನಿಂತುಕೊಳ್ಳಬೇಕು. ಇಲ್ಲಿಂದ ಅಲ್ಲಿಗೆ ಹೋದಾಗ ಈ ರೀತಿ ಧೋರಣೆಗಳು ಬದಲಾವಣೆ ಆಗಬಾರದು. ಆದರೆ ಬಹುಶಃ ಶಂಕೆಗೆ ಎಡೆಯಾಗುತ್ತದೆ. ನೈಸ್ ಕಂಪನಿ ಬಗ್ಗೆ ಹಲವಾರು ಸಲ ರಿವ್ಯೂ ಮಾಡುವಾಗ ಹಿಂದಿನ ಸಚಿವ ಶ್ರೀ ದೇಶಪಾಂಡೆಯವರು ಹೇಳಿದ್ದಾರೆ ಎಕ್ಸಸ್ ಲ್ಯಾಂಡಿದೆ ಅದನ್ನು ವಾಪಸ್ ತೆಗೆದುಕೊಳ್ಳಬೇಕು ಡಿನೋಟಿಫೈ ಮಾಡಬೇಕು ಅಂತ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಯಾರನ್ನೂ ದೂರಲು ಹೋಗುವುದಿಲ್ಲ, ಎಲ್ಲೋ ಒಂದು ಕಡೆ ಸರ್ಕಾರದಲ್ಲಿದ್ದ ಮಂತ್ರಿಗಳಿಗಿಂತ ಹೆಚ್ಚಿ ಘಟ್ಟಭದ್ರ ಹಿತಾಸಕ್ತಿಗಳು ಈ ವ್ಯವಸ್ಥೆಯಲ್ಲಿ ಕೆಲಸ ಮಾಡಿದ್ದಾವೇನೋ. ಅದರ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು. ಈ ದೃಷ್ಟಿಯಿಂದ ಸರ್ಕಾರ ಎಕ್ಸಸ್ ಲ್ಯಾಂಡನ್ನು ಮರು ವಾಪಸ್ ಪಡೆಯತಕ್ಕದ್ದು ಆದರೆ ರಸ್ತೆ ಆಗಬೇಕು ಅದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಪ್ರತಿಪಕ್ಷದ ನಾಯಕರ ಜತೆ ಒಟ್ಟಾರೆ ಕರ್ನಾಟಕದ ಹಿತದೃಷ್ಟಿಯಿಂದ ರೈತರ ಹಿತದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬರಬೇಕು. ಈಗಾಗಲೇ ಸುಪ್ರೀಂಕೋರ್ಟಿಗೆ ಪರಿರು ಪರಿಶೀಲನಾ ಅರ್ಜಿ ಸಲ್ಲಿಸಿದ್ದೀರಿ. ಈ ಸಂದರ್ಭದಲ್ಲಿ ನಾನು ಒಂದೇ ಒಂದು ಬಯಸುವುದೇನೆಂದರೆ ಮುಂದೆ ಇಂತಹ ಗೋಲ್‌ಮಾಲ್ ಆಗಬಾರದು ಅನ್ನುವುದಾದರೆ ಇದೊಂದಕ್ಕೆ ಕಡಿವಾಣ ಹಾಕಿ. ಮುಂದಿನ ದಿನಗಳಲ್ಲಿ ಈ ರಾಜ್ಯದ ಹಿತಾಸಕ್ತಿ ಕಾಪಾಡುವ ದಿಕ್ಕಿನಲ್ಲಿ ನಾವಾದರೂ ಹೊಸ ಶಕೆಯನ್ನು ಆರಂಭಿಸಲು ಪ್ರಯತ್ನ ಮಾಡಬೇಕು. ಹತ್ತು

ರೂಪಾಯಿಗೆಂದು ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿ ಗಳಾಗಿದ್ದಾಗ ಹೇಳಿದ್ದಾರೆ. ಹತ್ತು ರೂಪಾಯಿಗೆ ರಸ್ತೆ ಪಕ್ಕ ಬಿಟ್ಟು ಇನ್ನುಳಿದ ಭಾಗ ಬರುವುದಿಲ್ಲವೆಂದಿದ್ದಾರೆ. ನಾವು ಸುಮ್ಮನೆ ಪರಸ್ಪರ ಕೆಸರು ಎರಚಾಡುವ ಬದಲು instead of trying to be fishing out in the troubled water, ನಾವು ನಮ್ಮ ಕರ್ನಾಟಕದ ಹಿತದೃಷ್ಟಿ ಇಟ್ಟುಕೊಂಡು ನಿಲುವು ತಳೆದರೆ, ಕರ್ನಾಟಕದ ಜನರು ಏನು ಈ ಚರ್ಚೆ, ನಿಲುವು, ನಿರ್ಧಾರವನ್ನು ನೋಡುತ್ತಿದ್ದಾರೆ, ಇದನ್ನು ಇಡೀ ಕನ್ನಡದ, ವಿಶ್ವದ ಜನರು ನೋಡುತ್ತಿದ್ದಾರೆ. ಇದರ ಬಗ್ಗೆ ಶಾಸಕಾಂಗದ ಪ್ರತಿ ಪಕ್ಷಗಳಾಗಲಿ ಅಥವಾ ಆಡಳಿತ ಪಕ್ಷಗಳಾಗಲಿ ಕರ್ನಾಟಕದ ಜನತೆ ಹಿತದೃಷ್ಟಿಯಿಂದ ಬದ್ಧರಾಗಿದ್ದಾರೆಂಬುದನ್ನು ಒಪ್ಪಿಕೊಳ್ಳುತ್ತಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಮುಂದಿನ ದಿನಗಳಲ್ಲಿ ನಮ್ಮ ಅಧಿಕಾರಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂಬ ಮಾತನ್ನು ನಿನ್ನೆ ಮಾನ್ಯ ಸದಸ್ಯರಾದ ಶ್ರೀ ರಾಮಸ್ವಾಮಿಯವರು ಮತ್ತು ಶ್ರೀ ರಾಜಣ್ಣನವರು ಮಾತನಾಡುತ್ತಾ ಬಹಳ ಸ್ಪಷ್ಟವಾಗಿ ಹೇಳಿದರು. ಅಧಿಕಾರದಲ್ಲಿ, ಸರ್ಕಾರದ ವ್ಯವಸ್ಥೆಯಲ್ಲಿ ಅಧಿಕಾರಿಗಳಾಗಿದ್ದವರು ಎಲ್ಲಾ ನ್ಯೂನತೆಗಳನ್ನು, ರಹಸ್ಯಗಳನ್ನು ತೆಗೆದುಕೊಂಡು ಹೋಗಿ ಪ್ರೈವೇಟ್ ಕಂಪನಿಗಳಲ್ಲಿ ಅಡವಿಡುವುದು, ಒತ್ತೆ ಇಡುವುದು, ನಮ್ಮ ದೇಶದ defence ರಹಸ್ಯಗಳನ್ನು ಯಾರಿಗೋ ಮಾರಿದರು ಎನ್ನುವ ಬಗ್ಗೆ ನಾನು ಪತ್ರಿಕೆಗಳಲ್ಲಿ ಎಲ್ಲೋ ಒಂದು ಕಡೆ ಓದುತ್ತಿದ್ದೆ. ಇಂತಹ ಘಟನೆಗಳು ಜರುಗಿದರೆ, ಈ ದೇಶದಲ್ಲಿ ಹಣವೇ ಹೆಚ್ಚು ಆಗುವುದಾದರೆ ಅಥವಾ ಈ ದೇಶದಲ್ಲಿ ನಿಜವಾಗಿಯೂ ಮೀರ್‌ಸಾಧಿಕ್ ಪ್ರವೃತ್ತಿಯನ್ನು ನಾವು ಬೆಳೆಸುವುದಾದರೆ, ಮುಂದಿನ ದಿನಗಳಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. Road alignment ಇದುವರೆಗೂ ಏಕೆ ಮಾಡಿಲ್ಲ? Road alignment ಆಗುವುದಕ್ಕಿಂತಲೂ ಮುಂಚೆ ಏಕೆ ಇದನ್ನು acquire ಮಾಡಿದರು? ರೈತರ ಜಮೀನು ಎಂದರೆ ಅಷ್ಟು ತಾತ್ಸಾರವೇ? ಬಹುಶಃ ಸಾಮಾನ್ಯ ರೈತನಿಗೆ ಬಾಯಿ ಇಲ್ಲ. ಅದಕ್ಕೋಸ್ಕರ, ನಮ್ಮನ್ನು-ನಿಮ್ಮನ್ನು ಇಲ್ಲಿ ಕೂರಿಸಿರುವುದು. ಅದನ್ನು ಕೇಳತಕ್ಕಂಥ ನೈತಿಕ ಜವಾಬ್ದಾರಿ ನಮ್ಮದಾಗಿದೆ. ಹೊಸದಾಗಿ ಆಯ್ಕೆಯಾಗಿರುವ ನಾವು ಹಿಂದೆ ಕೇಳಿದ್ದನ್ನು ಮಾಡುವುದ ಕ್ಕಾಗುತ್ತದೆಯೇ? ಇವೊತ್ತು ನಾನು ಏನು ಮಾಡುತ್ತೇವೆನ್ನುವುದು ಮುಂದಿನ ಜನರಿಗೆ ಎಚ್ಚರಿಕೆಯ ಮಾರ್ಗವಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. 111 ಕಿಲೋಮೀಟರ್‌ಗೆ ಬೇಕಾಗಿರತಕ್ಕಂಥಾದ್ದು 4,528 ಎಕರೆಗಳು ಮಾತ್ರ. ಅಂದರೆ, ಒಂದು ಕಿಲೋಮೀಟರ್‌ಗೆ 40.7 ಎಕರೆ

ಬೇಕಾಗುತ್ತದೆಂಬ ಮಾತನ್ನು ಹೇಳಿದ್ದಾರೆ. 40 ಕಿಲೋಮೀಟರ್ ಉದ್ದದ peripheral 2,193 ಎಕರೆಗಳೆಂದು ಏನು ಹೇಳಿದ್ದಾರೆ, ಒಟ್ಟಾರೆ 20,193 ಎಕರೆ ಮಾತ್ರ ಬೇಕಾಗಿತ್ತು. ಅದು excess land. ಸನ್ಮಾನ್ಯ ದೇಶಪಾಂಡೆಯವರು ಮಾತನಾಡುತ್ತಾ 'ಇಂತಹ ಯೋಜನೆಗಳನ್ನು ಮಾಡುವಾಗ ಹೆಚ್ಚು land acquire ಮಾಡಿಕೊಳ್ಳಬೇಕಾಗುತ್ತದೆ, ಕಾರಣ, shortage ಬರಬಹುದು' ಎಂದರು. ಅದು ಇದ್ದರೂ ಇರಬಹುದು. ಆದರೆ, ಈಗ excess ಏನಿದೆ, ಅದನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥ ಜವಾಬ್ದಾರಿ ನಮ್ಮದಾಗಿದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ stamp duty exemption ಆಗಲಿ ಅಥವಾ tax exemption ಆಗಲಿ ಅಥವಾ ಅವರು ಕೇಳತಕ್ಕಂಥ power ಆಗಲಿ, water ಆಗಲಿ, ಎಲ್ಲವನ್ನೂ ಉಚಿತವಾಗಿ ಕೊಡುತ್ತೇವೆಂದು ಹೇಳುತ್ತಾರೆ. ವಸತಿ ಸಮಸ್ಯೆ ಕುರಿತಂತೆ ಬೆಳಿಗ್ಗೆ ಮಾತನಾಡುತ್ತಾ ಒಂದು ಮಾತನ್ನು ನಾನು ಹೇಳಿದೆ: ಗೃಹ ಸಮುಚ್ಚಯಗಳು ಐದೈದು ಟೌನ್‌ಶಿಪ್‌ಗಳು ಏನು ಬರುತ್ತವೆ, ಆ ಟೌನ್‌ಶಿಪ್‌ಗಳಲ್ಲಿ ಈ ಕರ್ನಾಟಕದ ಜನರು, ರೈತರು ಯಾರಾದರೂ ಒಂದು ಮನೆ, ಸೈಟು ಕೊಂಡುಕೊಳ್ಳುವುದಕ್ಕಾಗುತ್ತದೆಯೇ ಎಂಬ ಆತ್ಮ ವಿಮರ್ಶೆ ಮಾಡಿಕೊಳ್ಳೋಣ. ಮತ್ತೆ ಅವು ಬ್ರಿಟಿಷ್ ಕಾಲೋನಿಗಳಾದಂತೆ ಯಾರದೋ ಶ್ರೀಮಂತರ ಕಾಲೋನಿಗಳಾಗುತ್ತವೆ. ಅಲ್ಲಿ ಫ್ಲಾಟ್‌ಗಳು ಬರುತ್ತವೆ, ಆಗ ಅಲ್ಲಿ ಸೈಟು, ಫ್ಲಾಟ್ ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ, ನಾನು ಬೆಳಗ್ಗೆ ಒತ್ತಾಯ ಮಾಡುತ್ತಾ, ಮುಂದೆ ಬರತಕ್ಕಂಥ ಗೃಹ ಸಮುಚ್ಚಯಗಳಲ್ಲಿ ಕಡ್ಡಾಯವಾಗಿ 50 ಪರ್ಸೆಂಟ್ ಸ್ಥಳೀಯರಿಗೆ ಮತ್ತು 30 ಪರ್ಸೆಂಟ್ ಬಡವರಿಗೆ Below Poverty Line ಇಡಬೇಕು, ಮಧ್ಯಮ ವರ್ಗದವರಿಗೆ ಇಡಬೇಕೆಂದು ಹೇಳಿದ್ದು. ಮುಂದಿನ ಟೌನ್‌ಶಿಪ್‌ಗಳಲ್ಲಿ ಏನೇನು ಕಂಡಿಷನ್ಸ್ ಹಾಕಿದ್ದಾರೋ ಗೊತ್ತಿಲ್ಲ. ರಸ್ತೆಯಲ್ಲಿ ಓಡಾಡಲು ಅನುಮತಿ ಬೇಕೆಂದು ಹೇಳುತ್ತಾರೆ, ಪೊಲೀಸರ ಪರ್ಮಿಶನ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಹಾಗಿದ್ದರೆ, ಅವರಿಗೆ Police Force ಅವರಿಗೆ ಕೊಡುತ್ತೀರಾ? Suppose, ರೈತರಾಗಲಿ, ಮತ್ತೊಬ್ಬರಾಗಲಿ ಯಾರಾದರೂ ಆ ರಸ್ತೆಯಲ್ಲಿ ಓಡಾಡಿದರೆ, ಅವರನ್ನು ಅರೆಸ್ಟ್ ಮಾಡುತ್ತಾರೆಯೇ? ಅಂದರೆ, Are they delegating powers to the NICE Company to arrest ಅಥವಾ ಅವರಿಗೆ Police Force ಒದಗಿಸಿಕೊಡುತ್ತೀರಾ ಎಂಬ ಒಂದು ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ನಿಮ್ಮ ಮುಂದಿಡಲು ಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ದಯವಿಟ್ಟು ಇವೆಲ್ಲವೂ ಸ್ಪಷ್ಟವಾಗಿ ಗೊತ್ತಾಗಬೇಕೆಂದರೆ, ಸಂಪೂರ್ಣ ಮಾಹಿತಿಯುಳ್ಳ ಶ್ವೇತ ಪತ್ರ ಬರಬೇಕು ಮತ್ತು ಇಂತಹುದು ಯಾವುದೂ scandal ಆಗದ ರೀತಿಯಲ್ಲಿ, ಈ ಒಂದು ನೆಪದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಯಾರೋ ಲಾಭ ಮಾಡಿಕೊಂಡು ಹೋಗುವುದಾದರೆ, ಬಹುಶಃ ಕರ್ನಾಟಕದ ಜನರು ಅಥವಾ ಈ ಮಣ್ಣಿನ ಜನರಾದ ನಾವೇನು ಬಳೆ ತೊಟ್ಟುಕೊಂಡಿದ್ದೇವೆಯೇ ಅಥವಾ ಬುದ್ದಿ ಇಲ್ಲವೇ? ವಿವೇಕ ಇಲ್ಲವೇ? ವಿವೇಚನೆ ಇಲ್ಲವೆ? ದಯವಿಟ್ಟು ಈ ಸದನ ಅದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತಾ, ನೈಸ್ ಬಂದ ದಾರಿ, ಅದು ಹಿಡಿದಿರುವ ಅಡ್ಡದಾರಿಗೆ ಈ ರಾಜ್ಯವು ರಹದಾರಿ ಆಗಬಾರದೆಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಉಪಾಧ್ಯಕ್ಷರು: ಈಗ ಬಿಎಂಐಸಿ ಯೋಜನೆ ವಿಚಾರದಲ್ಲಿ ಚರ್ಚೆ ಮುಕ್ತಾಯವಾಯಿತು.

ಶ್ರೀ ಆರ್.ವಿ. ದೇಶಪಾಂಡೆ: ನಾಳೆ ಮಲ್ಲಿಕಾರ್ಜುನ ಖರ್ಗೆ ಒಬ್ಬರು ಮಾತನಾಡುತ್ತಾರೆಂದು ಸಿ.ಎಂ. ಹೇಳಿದರು. ಅದಾದ ನಂತರ, ಸಿ.ಎಂ. ಅವರ ರಿಪ್ಲೈ ಇರುತ್ತದೆಂದರು.

ಉಪಾಧ್ಯಕ್ಷರು: ಆಗಬಹುದು.

ಶ್ರೀ ಎಚ್.ಡಿ. ಕುಮಾರಸ್ವಾಮಿ: ಖರ್ಗೆಯವರು ಮತ್ತು ಎಂ.ಪಿ.ಪ್ರಕಾಶ್ ರವರು ಬೆಳಿಗ್ಗೆ ಏನು ಮಾತನಾಡಬೇಕೆಂದು ಹೇಳಿದ್ದಾರೆ, ಬೆಳಿಗ್ಗೆ ಹತ್ತು ಗಂಟೆಗೆ Question Hour ಏನಾದರೂ ಮುಂದಕ್ಕೆ ಹಾಕಿ..

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೆ, ನಿಮಗೆ ನಾನು ಸಹಾಯ ಮಾಡುತ್ತಿದ್ದೇನೆ. ನನ್ನ information ಪ್ರಕಾರ ವಿರೋಧ ಪಕ್ಷದ ನಾಯಕರು, ಖರ್ಗೆಯವರು ಮತ್ತು ರಮೇಶ್‌ಕುಮಾರ್‌ರವರು ನಾಳೆ ಮುಂಜಾನೆ ಶ್ರೀನಿವಾಸಪುರ ಕ್ಷೇತ್ರಕ್ಕೆ ಹೋಗುತ್ತಿದ್ದಾರೆ.

ಉಪಾಧ್ಯಕ್ಷರು: ನಾಳೆ ಬೆಳಗ್ಗೆ ಮಾತನಾಡುತ್ತೇನೆಂದು ಖರ್ಗೆಯವರು ನನಗೆ ಬೆಳಗ್ಗೆ ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ: ನಾಳೆ ಬೆಳಗ್ಗೆ ಮಾತನಾಡುತ್ತೇನೆಂದು ಹೇಳಿಲ್ಲ. ಅದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿ. ನಾನು ಏಕೆ ಹೇಳುತ್ತಿದ್ದೇನೆಂದರೆ, ನನ್ನ ಮಾಹಿತಿ ಪ್ರಕಾರ ಶ್ರೀನಿವಾಸಪುರ ಕ್ಷೇತ್ರಕ್ಕೆ ನಾನು ಹಾಗೂ ಖರ್ಗೆಯವರು ಹೋಗುತ್ತಿದ್ದೇವೆಂದು ವಿರೋಧ ಪಕ್ಷದ ನಾಯಕರು ಹೇಳಿದರು. ಹೋದರೆ, ಅವರು ಮಧ್ಯಾಹ್ನ ಬರುವ ಕಾರ್ಯಕ್ರಮ ಇದೆ. ಹಾಗಾಗಿ, ತಮ್ಮ ಗಮನಕ್ಕೆ ತಂದೆ. ನಿರ್ಣಯ ತಮ್ಮದು.

ಒಬ್ಬ ಮಾನ್ಯ ಸದಸ್ಯರು: ಖರ್ಗೆ ಸಾಹೇಬರು ಬೆಳಗ್ಗೆ ಮಾತನಾಡುತ್ತೇವೆಂದು ಹೇಳಿದ್ದಾರೆ.

ಉಪಾಧ್ಯಕ್ಷರು: ಅವರು ಬೆಳಗ್ಗೆ ಮಾತನಾಡುತ್ತೇನೆಂದು ಹೇಳಿರುವುದರಿಂದ, ನಾಳೆ ಬೆಳಿಗ್ಗೆ ಅವರು ಮಾತನಾಡಿದ ನಂತರ ತಾವು (ಮುಖ್ಯಮಂತ್ರಿ) ಉತ್ತರ ಕೊಡಿ. ನಾಳೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ಎಂ.ಪಿ. ಪ್ರಕಾಶ್‌ರವರು ಮಾತನಾಡಿದ ನಂತರ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಈಗ ಸದನವನ್ನು ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 58 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ನಾಳೆ 6ನೇ ಜುಲೈ 2006ರ ಗುರುವಾರದಂದು ಬೆಳಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

* * *

ಅನುಬಂಧ 'ಅ'

ದಿನದ ಪಟ್ಟಿಯಲ್ಲಿ ಸೇರಿಸಲಾದ ಚುಕ್ಕೆ ಗುರ್ತಿನ ಪ್ರಶ್ನೋತ್ತರಗಳು

ಜಿಲ್ಲಾ ಪಂಚಾಯತ್ ರಸ್ತೆಗಳು

238 (1037) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ, ಜಿಲ್ಲಾ ಪಂಚಾಯತ್ ರಸ್ತೆಗಳ ಉದ್ದಳತೆ ಎಷ್ಟು ;

ಆ) ಈ ಜಿಲ್ಲಾ ಪಂಚಾಯತ್ ರಸ್ತೆಗಳಿಗೆ 2004–05ನೇ ಸಾಲಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ;

ಇ) 2001–02, 2002–03 ಮತ್ತು 2003–04ರಲ್ಲಿ ಕುಂದಗೋಳ ತಾಲ್ಲೂಕಿನಲ್ಲಿರುವ ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಖರ್ಚು ಮಾಡಿದ ಹಣವೆಷ್ಟು ;

ಈ) ಈ ಪ್ರಸಕ್ತ ವರ್ಷದಲ್ಲಿ ಎಷ್ಟು ಹೊಸ ರಸ್ತೆಗಳನ್ನು ನಿರ್ಮಾಣ ಮಾಡಲಾಗುವುದು ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) –